

ಚಿತ್ರ: ಕೆ.ಎಸ್. ರಾಜಾರಾಮ್

## ಉಮಾ ರಾವ್

ಕನ್ನಡದ ಸೂಕ್ಷ್ಮ, ಅಪ್ಪಟ ಆಧುನಿಕ ಸಂವೇದನೆಯ ಲೇಖಕಿ ಉಮಾ ರಾವ್. ಯಾವುದೇ ಭಾರಗಳಿಲ್ಲದೆ ಬದುಕನ್ನು ಮುಕ್ತವಾಗಿ, ಸರಳವಾಗಿ ನೋಡುವ ಅವರ ಬರವಣಿಗೆ ಕನ್ನಡ ಸಾಹಿತ್ಯಕ್ಕೆ ಹೊಸನುಡಿಗಟ್ಟೊಂದನ್ನು ಸೇರಿಸಿದೆ. ಅವರ ಗದ್ಯಕ್ಕೆ ಇರುವ ಲವಲವಿಕೆಯು, ಸಂಗ್ರಹವಾಗಿ ಅನುಭವವನ್ನು ಮಂಡಿಸುವ ಗುಣ ಕನ್ನಡ ಲೇಖಕಿಯರಲ್ಲಿ ಅವರನ್ನು ವಿಶಿಷ್ಟರನ್ನಾಗಿಸಿದೆ. ಕತೆಗಾರ್ತಿ, ಕಾದಂಬರಿಗಾರ್ತಿ, ಪ್ರವಾಸಿ ಬರಹಗಳ ಲೇಖಕಿ, ಅಂಕಣಕಾರ್ತಿ, ಟೀವಿ ಕಾರ್ಯಕ್ರಮಗಳ, ಜೀವನಚರಿತ್ರೆಗಳ ಲೇಖಕಿ ಹೀಗೆ ಹಲವು ಪ್ರಕಾರಗಳಲ್ಲಿ ಅವರ ಛಾಪು ಮೂಡಿದೆ.

ಬೆಂಗಳೂರಿನವರಾದ ಉಮಾ ಬಿ.ಎಸ್ಸಿ; ಬಿ.ಎಲ್ ಪದವೀಧರರು. ಅವರ ತಂದೆ ಸಿ.ಎನ್. ಸ್ವಾಮಿರಾವ್ ವೈದ್ಯರಾಗಿ ಕೆಲಸ ಮಾಡುತ್ತಿದ್ದರು. ತಾಯಿ ರತ್ನಾ ಸ್ವಾಮಿರಾವ್. 19 ವರ್ಷಕ್ಕೆ ಮದುವೆಯಾಗಿ ಪತಿಯೊಂದಿಗೆ ಮುಂಬಯಿಗೆ ಹೋದ ಅವರ ಸಾಹಿತ್ಯಿಕ ಬರವಣಿಗೆ ಶುರುವಾಗಿದ್ದು ಅಲ್ಲಿಯೇ. ಅವರು ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1994 ರಲ್ಲಿ ಕೆನಡಾದ ವ್ಯಾಂಕೂವರ್‌ನ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ 'ಕ್ರಿಯೇಟಿವ್ ರೈಟಿಂಗ್ ವಿಭಾಗ'ದ 'ಆಂಡ್ರ್ಯೂಸ್ ಫೆಲೋಶಿಪ್' ಪಡೆದ ಅವರು ಅಲ್ಲಿ 3 ತಿಂಗಳು ಅಧ್ಯಯನ ಮಾಡಿದ್ದಾರೆ.

'ಅಗಸ್ತ್ಯ', 'ಕಡಲ ಹಾದಿ', 'ಸಿಲೋನ್ ಸುಶೀಲಾ, ಹಾವಾಡಿಗ, ಮೀಸೆ ಹೆಂಗಸು, ಮತ್ತು ಇತರರು' ಅವರ ಕಥಾ ಸಂಗ್ರಹಗಳಾಗಿವೆ. 'ನೂರುಸ್ವರ', 'ವನಜಮ್ಮನ ಸೀಟು' ಅವರ ಕಾದಂಬರಿಗಳು. 'ಅವಳ ಸೂರ್ಯ' ಕೆನಡಿಯನ್ ಲೇಖಕಿಯರ ಕತೆಗಳ ಅನುವಾದ. 'ರಾಕಿ ಪರ್ವತಗಳ ನಡುವೆ ಕ್ಯಾಬರೆ', 'ಇನ್ನು ಎಲ್ಲಿಗೋಟ' ಅವರ ಪ್ರವಾಸ ಕಥನಗಳಾಗಿವೆ. 'ಮುಂಬಯಿ ಡೈರಿ' ಅಂಕಣಗಳ ಸಂಗ್ರಹವಾಗಿದ್ದು, 'ದಲೈಲಾಮಾ' ಎಂಬ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಖ್ಯಾತ ಸಿನಿ ಛಾಯಾಗ್ರಾಹಕ ವಿ.ಕೆ. ಮೂರ್ತಿ ಅವರ ಜೀವನ ಚರಿತ್ರೆ 'ಬಿಸಿಲು ಕೋಲು' ಅವರಿಗೆ ಖ್ಯಾತಿ ತಂದುಕೊಟ್ಟ ಪುಸ್ತಕವಾಗಿದೆ. ಉಮಾ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ರಾಮೂನ ಸ್ನೇಹಿತರೋ, ಅವನಿಗಿಂತ ಹತ್ತಾರು ವರ್ಷ ಹಿರಿಯರು. ಇವನು ಕುಳಿತುಕೊಳ್ಳುವ ಫುಟ್‌ಪಾತಿನ ಮೇಲೆ, ಆ ಸಾಲಿನಲ್ಲಿ ಕುಳಿತುಕೊಳ್ಳುವ ವ್ಯಾಪಾರಸ್ಥರೆಲ್ಲಾ ಇವನ ಗೆಳೆಯರು. ಇವನ ಒಂದು ಪಕ್ಕದಲ್ಲಿ ಉದ್ದನೆಯ ಬಿಳಿಯ ಗಡ್ಡ, ಕೇಸರಿ ಬಣ್ಣದ ಅಂಗಿಯ, ಕೈ ನೋಡುವ 'ಬಾಬಾ' ದಿನವೆಲ್ಲಾ ಹೊಗೆಸೊಪ್ಪು ತಿನ್ನುವ ಅವನ ಹತ್ತಿರ ಹೋದರೆ ರಾಮೂಗೆ ಹೊಟ್ಟೆ ತೊಳೆಸುವಂತಾಗುತ್ತಿತ್ತು. ಬಾಬಾನ ಹಿಂದೆ ರೇಖೆಗಳನ್ನೆಲ್ಲಾ ಊರಿ ಬಿಡಿಸಿದ ಒಂದು ದೊಡ್ಡ ಹಸ್ತದ ಚಿತ್ರವಿರುವ ಬಟ್ಟೆ ಜೋತಾಡುತ್ತಿತ್ತು. ಮುಂದೆ ಒಂದು ಬಟ್ಟೆ